**ದಿಃ 18-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1) ನನಗೆ 1 ನೇ ಪ್ರತಿವಾದಿ ನನ್ನ ಗ್ರಾಹಕನಾಗಿ ಒಂದು ವರ್ಷದಿಂದ ಪರಿಚಯವಿದ್ದರು. ಅದೇ ರೀತಿ ವಾದಿಯು ಸಹ ಒಂದು ವರ್ಷದಿಂದ ಪರಿಚಯವಿರುತ್ತಾರೆ. ನಿಪಿ-1 ನ್ನು ನಾನು ತಯಾರಿಸುವ ಸಮಯದಲ್ಲಿ ವಾದಿಹಾಗೂ 1 ನೇ ಪ್ರತಿವಾದಿ ಹಾಗೂ ಇಬ್ಬರು ಸಾಕ್ಷಿದಾರರು ಹಾಜರಿದ್ದು , ಸದರಿ ಸಾಕ್ಷಿದಾರರ ಹೆಸರುಗಳು ನೆನಪಿಲ್ಲ. ಸದರಿಯವರು ನನ್ನ ಕಚೇರಿಗೆ ಬೆಳಿಗ್ಗೆ 11-30 ರಿಂದ 12-00 ಗಂಟೆಯ ಸಮಯದಲ್ಲಿ ಬಂದಿದ್ದರು. ಸದರಿಯವರೆಲ್ಲರೂ ಸೇರಿಯೇ ಒಟ್ಟಿಗೆ ಬಂದಿದ್ದರು. ನನ್ನ ಸಮಕ್ಷಮ ಸದರಿಯವರು ನನ್ನ ಕಚೇರಿಯಲ್ಲಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ನಿಪಿ-1 ರ ವ್ಯವಹಾರವನ್ನು ಎಲ್ಲಿ ಹಾಗೂ ಯಾವಾಗ ಮಾಡಿದರು ಎಂದು ನನಗೆ ಗೊತ್ತಿಲ್ಲ. ವಾದಿ ಹಾಗೂ 1 ನೇ ಪ್ರತಿವಾದಿ ನನ್ನ ಕಚೇರಿಯಲ್ಲಿ ಹಣದ ಕೊಡು ತೆಗೆದುಕೊಳ್ಳುವ ವ್ಯವಹಾರವನ್ನು ಮಾಡಿದ್ದು, ಎಷ್ಟು ಹಣವನ್ನು ಕೊಟ್ಟಿರುತ್ತಾರೆ ನನಗೆಗೊತ್ತಿಲ್ಲ. ನನಗೆ ನಿಪಿ-1 ನ್ನು ತಯಾರಿಸಲು 1 ನೇ ಪ್ರತಿವಾದಿ ಕೊಟ್ಟಿದ್ದರು. ನಾನು ನಿಪಿ-1 ನ್ನು ಅವರು ನೀಡಿದ್ದ ಉತಾರೆಯ ಆಧಾರದ ಮೇಲೆ ತಯಾರಿಸಿರುತ್ತೇನೆ. ನಿಪಿ-1 ನ್ನು 12-00 ಗಂಟೆಯವರೆಗೂ ಮಾಹಿತಿ ಪಡೆದುಕೊಂಡು ಸುಮಾರು 1-30 ಗಂಟೆಗೆ ನಿಪಿ-1 ನ್ನು ಸಂಪೂರ್ಣವಾಗಿ ತಯಾರಿಸಿ ಕೊಟ್ಟಿರುತ್ತೇನೆ. ನಿಪಿ-1 ರಲ್ಲಿ ಅದನ್ನು ಬೆರಳಚ್ಚು ಮಾಡಿದವರ ಹೆಸರು ಬರೆದಿರುವುದಿಲ್ಲ ಎಂದರೆ ಸರಿ.

2) ಸಾಮಾನ್ಯವಾಗಿ ಬಡ್ಡಿ ವ್ಯವಹಾರದಲ್ಲಿ ನಿಪಿ-1 ರಂತಹ ಕರಾರು ಪತ್ರವನ್ನು ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನಿಪಿ-1 ನ್ನು ಬಡ್ಡಿ ವ್ಯವಹಾರದಲ್ಲಿ ಭದ್ರತೆಗಾಗಿ ಬರೆದುಕೊಟ್ಟ ದಾಖಲೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ-1ನ್ನು ಬರೆದುಕೊಳ್ಳುವಾಗ ಪ್ರತಿವಾದಿ 1 ರವರ ಪತ್ನಿ ಮತ್ತು ಮಕ್ಕಳು ಬಂದಿರಲಿಲ್ಲ. ನಿಪಿ-1 ನ್ನು ತಯಾರಿಸುವಾಗ ಅದರಲ್ಲಿ ಹೇಳಿರುವ ಪ್ರಾಪಂಚಿಕ ಅಡಚಣೆ ಏನಾಗಿತ್ತು ಎಂದು ನಾನು ಕೇಳಿರುವುದಿಲ್ಲ. 1 ನೇ ಪ್ರತಿವಾದಿ ಮಧ್ಯಪಾನ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ತನ್ನ ಕುಟುಂಬದ ಅಡಚಣೆಗಾಗಿ ನಿಪಿ-1 ನ್ನು ಮಾಡಿಕೊಟ್ಟಿರುವುದಿಲ್ಲ ಅವರ ಕುಡಿತದ ಚಟಕ್ಕಾಗಿ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರ ಲ್ಲಿರುವ ವಿಷಯಗಳನ್ನು ನಾನು ತಯಾರಿಸಿರುವುದಿಲ್ಲ , ವಾದಿ ಹಾಗೂ 1 ನೇ ಪ್ರತಿವಾದಿ ಬೇರೆಯವರಿಂದ ಬೆರಳಚ್ಚು ಮಾಡಿಸಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಖರೀದಿ ಸಮಯದಲ್ಲಿ ಕೊಡುವ ಮುಂಗಡ ಹಣವನ್ನು ಕೊಟ್ಟಿರುವ ಬಗ್ಗೆ ನಾನು ವಾದಿ ಹಾಗೂ 1 ನೇ ಪ್ರತಿವಾದಿಗೆ ಕೇಳಿರುವುದಿಲ್ಲ. ನಾನು 1 ನೇ ಪ್ರತಿವಾದಿ ಕಚೇರಿಗೆ ಮಾಹಿತಿ ಕೊಟ್ಟರು ಎಂದು ಹೇಳಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಾನು ವಾದಿಗೆ ಅನುಕೂಲ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.